ಈ) ಸದರಿಯವರು ನಿಯಮಾನುಸಾರ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳಲಿಲ್ಲ.

ಎ) ಇಲ್ಲ.

ಉದ್ಭವಿಸುವುದಿಲ್ಲ.

ರೇಷ್ಮೆ ವರದಾನ ಕಾರ್ಯಕ್ರಮ

859(1367) ಶ್ರೀ ಶ್ರೀರಾಮರೆಡ್ಡಿ ಜಿ.ವಿ. : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2006–07ನೇ ಸಾಲಿನಲ್ಲಿ ರೇಷ್ಮೆ ವರದಾನ ಯೋಜನೆಗಾಗಿ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು ; (ಜಿಲ್ಲಾವಾರು ವಿವರ ನೀಡುವುದು);

ಆ) ಇದರಿಂದ ಎಷ್ಟು ಜನ ರೇಷ್ಮೆ ಬೆಳೆಗಾರರು ಪ್ರಯೋಜನ ಪಡೆದಿರುತ್ತಾರೆ ;

ಇ) ಪ್ರಸ್ತುತ ವರ್ಷ ರೇಷ್ಮೆ ವರದಾನ ಯೋಜನೆಯಡಿ ಕೋಲಾರ ಜಿಲ್ಲೆಗೆ ಒದಗಿಸಿರುವ ಅನುದಾನವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಶಿವಣ್ಣ (ರೇಷ್ಮೆ ಸಚಿವರು)

ಅ) 2006–07ನೇ ಸಾಲಿನಲ್ಲಿ ರೇಷ್ಮೆ ವರದಾನ ಯೋಜನೆಯಡಿ ರೂ.293.10 ಲಕ್ಷಗಳು ವೆಚ್ಚ ಮಾಡಲಾಗಿದೆ. ಜಿಲ್ಲಾವಾರು ವೆಚ್ಚದ ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಜಿಲ್ಲೆ	ವೆಚ್ಚ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ಗ್ರಾಮಾಂತರ	28.341
2	ಬೆಂಗಳೂರು ನಗರ	3.965
3	ಬಾಗಲಕೋಟೆ	4.738
4	ಬೆಳಗಾಂ	9.710
5	ಬಳ್ಳಾರಿ	5.000
6	ಬೀದರ್	2.400
7	ಬಿಜಾಪುರ	2.576
8	ಚಾಮರಾಜನಗರ	0.980
9	ಚಿಕ್ಕಮಗಳೂರು	0.500
10	ಚಿತ್ರದುರ್ಗ	7.768
11	ದಕ್ಷಿಣ ಕನ್ನಡ	0.225

12	ದಾವಣಗೆರೆ	2.275
13	ಧಾರವಾಡ	0.950
14	ಗದಗ	1.300
15	ಗುಲ್ಬರ್ಗಾ	4.400
16	ಹಾಸನ	4.131
17	ಹಾವೇರಿ	4.900
18	ಕೊಡಗು	0.200
19	ಕೋಲಾರ	147.970
20	ಕೊಪ್ಪಳ	2.753
21	ಮಂಡ್ಯ	8.138
22	ಮೈಸೂರು	5.585
23	ರಾಯಚೂರು	2.214
24	ಶಿವಮೊಗ್ಗ	1.995
25	ತುಮಕೂರು	30.380
26	ಉಡುಪಿ	0.175
27	ಉತ್ತರ ಕನ್ನಡ	1.267
28	ಮೈಸೂರು ಬಿತ್ತನೆ ವಲಯ	8.264
	ಒಟ್ಟು	293.100

ಆ) ಇದರಿಂದ 4350 ರೇಷ್ಮೆ ಬೆಳೆಗಾರು ಪ್ರಯೋಜನ ಪಡೆದಿದ್ದಾರೆ.

ಇ) 2007–08ನೇ ಸಾಲಿನ ಆಯವ್ಯಯದಲ್ಲಿ ರೇಷ್ಮೆ ವರದಾನ ಯೋಜನೆಯ ಅನುಷ್ಠಾನಕ್ಕಾಗಿ ರೂ. 300.00 ಲಕ್ಷಗಳು ನಿಗದಿಪಡಿಸಲಾಗಿದ್ದು ಇದುವರೆಗೆ ರೂ. 100.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಕೋಲಾರ ಜಿಲ್ಲೆಗೆ ರೂ. 26.70 ಲಕ್ಷಗಳನ್ನು ಒದಗಿಸಲಾಗಿದೆ. ತಾಲ್ಲೂಕುವಾರು ಒದಗಿಸಿರುವ ಅನುದಾನದ ವಿವರ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
1	ಕೋಲಾರ	2.50
2	ಬಂಗಾರಪೇಟೆ	1.50
3	ಮಾಲೂರು	1.00
4	ಮುಳಬಾಗಿಲು	2.25
5	ಶ್ರೀನಿವಾಸಪುರ	2.50
6	ಚಿಂತಾಮಣಿ	2.75

7	ಶಿಡ್ಲಘಟ್ಟ	8.69
8	ಚಿಕ್ಕಬಳ್ಳಾಪುರ	2.01
9	ಗೌರಿಬಿದನೂರು	1.50
10	ಬಾಗೇಪಲ್ಲಿ	1.25
11	ಗುಡಿಬಂಡೆ	0.75
	ಒಟ್ಟು	26.70

860(1368) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಒತ್ತುವರಿ ಮಾಡಿರುವ ಅರಣ್ಯ ಭೂಮಿ ಎಷ್ಟು; (ಕೇಂದ್ರ ಮತ್ತು ರಾಜ್ಯ ಮೀಸಲು ಅರಣ್ಯ ಪ್ರದೇಶವನ್ನು ವಿಂಗಡಿಸಿ ಪ್ರತ್ಯೇಕವಾಗಿ ವಿವರ ನೀಡುವುದು)

ಆ) 1985ರಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ನೀಡಿರುವ "ಸಿ" ಮತ್ತು "ಡಿ" ವರ್ಗದ ಭೂಮಿ ಎಷ್ಟು ;

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿಯ ಅರಣ್ಯ ಒತ್ತುವರಿ ಪ್ರದೇಶವು 65585.65 ಹೆ. ಅರಣ್ಯ ಕಾಯ್ದೆ 1963ರ ನಿಯಮ 23 ರನ್ವಯ ರಾಜ್ಯ ಅರಣ್ಯವನ್ನು ರಕ್ಷಿತ ಅರಣ್ಯವೆಂದು ಘೋಷಿಸಿಲಾಗಿದೆ. ಕೇಂದ್ರ ಹಾಗೂ ರಾಜ್ಯ ಮೀಸಲು ಅರಣ್ಯ ಪ್ರದೇಶಗಳು ಎಂದು ಇರುವುದಿಲ್ಲ.

ಆ) 3.01.1991ರ ಪೂರ್ವದಲ್ಲಿ 18 ಲಕ್ಷ ಎಕರೆ ಸಿ ಮತ್ತು ಡಿ ವರ್ಗದ ಭೂಮಿಯನ್ನು ಕಂದಾಯ ಇಲಾಖೆಯಿಂದ ನೀಡಲಾಗಿತ್ತು. ಆಸಂ: ಆರ್‌ಡಿ 106 ಎಲ್‌ಜಿ 88 ದಿನಾಂಕ: 03.01.1991ರ ಪ್ರಕಾರ 16,32,500 ಎಕರೆ ಭೂಮಿಯನ್ನು ಮರಳಿ ಕಂದಾಯ ಇಲಾಖೆಯು ಹಿಂದಕ್ಕೆ ತೆಗೆದುಕೊಂಡಿತ್ತು. ಆಸಂ: ಆರ್‌ಡಿ 106 ಎಲ್‌ಜಿ 88 ದಿನಾಂಕ 07.06.1993 ರಂತೆ ಎಲ್‌ಜಿ 88 ದಿನಾಂಕ 07.06.1993 ರಂತೆ 2.58 ಲಕ್ಷ ಎಕರೆ ಭೂಮಿಯನ್ನು ಕಂದಾಯ ಇಲಾಖೆಯಿಂದ ಲ್ಯಾಂಡ್ ಬ್ಯಾಂಕಿಗೆ ಹಸ್ತಾಂತರಿಸಲು ಆದೇಶಿಸಲಾಗಿತ್ತು. ದಿನಾಂಕ: 17.10.1995 ವರೆಗಿನ ಆದೇಶಗಳ ಪ್ರಕಾರ 1,76,401.85 ಹೆಕ್ಟೇರ್ ಜಮೀನನ್ನು ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯಿಂದ ವರ್ಗಾಯಿಸಲಾಗಿದೆ.

863(1042) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2007–08ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹೊಸ ಮದ್ಯದ ಅಂಗಡಿಗಳಿಗೆ: ಬಾರ್‌ಗಳಿಗ ಅನುಮತಿ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)